## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1792 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 24.03.2020 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿ ಗ್ರಾಮ ಪಂಚಾಯಿತಿಯನ್ನು ನಗರ ಪಂಚಾಯಿತಿಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿ ಗ್ರಾಮ ಪಂಚಾಯಿತಿ ಯೊಂದಿಗೆ ಮೆನ್ನಬೆಟ್ಟು ಹಾಗೂ ಕಟೀಲು ಗ್ರಾಮ ಪಂಚಾಯಿತಿಯನ್ನು ಒಟ್ಟುಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುತ್ತದೆ. |
| (ಆ) | ಕಿನ್ನಿಗೋಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಜನಸಂಖ್ಯೆ ಎಷ್ಟು; ಮತ್ತು ಭೌಗೋಳಿಕ ವಿಸ್ತೀರ್ಣ ಎಷ್ಟು; (ವಿವರ ನೀಡುವುದು) | 2011ರ ಜನಗಣತಿಯನುಸಾರ ಕಿನ್ನಿಗೋಳಿ ಗ್ರಾಮದ ಜನಸಂಖ್ಯೆಯು 8126, ಮೆನ್ನಬೆಟ್ಟು ಗ್ರಾಮದ ಜನಸಂಖ್ಯೆ 4374 ಹಾಗೂ ಕಟೀಲು ಗ್ರಾಮ ಪಂಚಾಯಿತಿಯ ಜನಂಖ್ಯೆ 4490 ಇದ್ದು, ಒಟ್ಟು ಜನಸಂಖ್ಯೆ 16990 ಆಗುತ್ತದೆ.<br><br>ಕಿನ್ನಿಗೋಳಿ ಪ್ರದೇಶದ ವಿಸ್ತೀರ್ಣ 15.33 ಚ.ಕಿ.ಮೀ, ಮೆನ್ನಬೆಟ್ಟು ಪ್ರದೇಶದ ವಿಸ್ತೀರ್ಣ 5.519 ಹಾಗೂ ಕಟೀಲು ಗ್ರಾಮ ಪಂಚಾಯಿತಿಯ 16.54 ಇದ್ದು, ಒಟ್ಟು 37.38 ಪ್ರತಿ ಚ.ಕಿ.ಮೀ ಆಗುತ್ತದೆ. |
| (ಇ) | ಕಿನ್ನಿಗೋಳಿ ಗ್ರಾಮ ಪಂಚಾಯತ್ ನಗರ ಪಂಚಾಯತ್ ಆಗಿ ಪರಿವರ್ತನೆ ಮಾಡಲು ಗ್ರಾಮ ಪಂಚಾಯತ್‌ಯಿಂದ ಬೇಡಿಕೆ ಬಂದಿದೆಯೇ; ಬಂದಿದ್ದಲ್ಲಿ ಅದರ ವಿವರ ನೀಡುವುದು; ಗ್ರಾಮ ಪಂಚಾಯಿತಿಗಿರುವ ಆದಾಯ ಎಷ್ಟು; | ಕಿನ್ನಿಗೋಳಿ ಗ್ರಾಮ ಪಂಚಾಯಿತಿಯಲ್ಲಿ ಸಾಮಾನ್ಯ ಸಭೆಯ ನಿರ್ಣಯ ಸಂ:36/2018-19, ದಿ:25.09.2018 ರಲ್ಲಿ, ಮೆನ್ನಬೆಟ್ಟು ಗ್ರಾಮ ಪಂಚಾಯಿತಿಯಲ್ಲಿ ಸಾಮಾನ್ಯ ಸಭೆಯ ನಿರ್ಣಯ ಸಂ:84(10)/2017-18, ದಿ:09.08.2017 ರಲ್ಲಿ ಹಾಗೂ ಕಟೀಲು ಗ್ರಾಮ ಪಂಚಾಯಿತಿಯಲ್ಲಿ ನಿರ್ಣಯ ಸಂಖ್ಯೆ:98/2019-20, ದಿ:12.12.2019 ರಲ್ಲಿ ತೀರ್ಮಾನ ಕೈಗೊಂಡಿರುತ್ತಾರೆ. ಸದರಿ ತೀರ್ಮಾನಗಳನ್ವಯ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ.<br><br>**<u>ರಾಜಸ್ವ (2015-16)</u>**<br>ತೆರಿಗೆ ಸ್ವೀಕೃತಿ:1784075.00(ಕಿನ್ನಿಗೋಳಿ)<br>2255396.00(ಮೆನ್ನಬೆಟ್ಟು)<br>658290.00(ಕಟೀಲು) |

| | | |
|---|---|---|
| | | ತೆರಿಗೆಯೇತರ ಸ್ವೀಕೃತಿ: 21301803.**00(ಕಿನ್ನಿಗೋಳಿ)**<br>477648.00(**ಮೆನ್ನಬೆಟ್ಟು**)<br>508486.00(**ಕಟೀಲು**)<br>**ರಾಜಸ್ವ (2016-17)**<br>ತೆರಿಗೆ ಸ್ವೀಕೃತಿ:2425394(ಕಿನ್ನಿಗೋಳಿ)<br>1849954.00(ಮೆನ್ನಬೆಟ್ಟು)<br>1289882(ಕಟೀಲು)<br>ತೆರಿಗೆಯೇತರ ಸ್ವೀಕೃತಿ: 22805829(ಕಿನ್ನಿಗೋಳಿ)<br>609641(ಮೆನ್ನಬೆಟ್ಟು)<br>854512(ಕಟೀಲು)<br>**ರಾಜಸ್ವ (2017-18)**<br>ತೆರಿಗೆ ಸ್ವೀಕೃತಿ:3517762.00(ಕಿನ್ನಿಗೋಳಿ)<br>2096451.00(ಮೆನ್ನಬೆಟ್ಟು)<br>1116501.00(ಕಟೀಲು)<br>ತೆರಿಗೆಯೇತರ ಸ್ವೀಕೃತಿ: 22095736.**00(ಕಿನ್ನಿಗೋಳಿ)**<br>661762.00(**ಮೆನ್ನಬೆಟ್ಟು**)<br>593585.00(**ಕಟೀಲು**) |
| (ಈ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳನ್ನು ನಗರ ಪಂಚಾಯಿತಿಗಳು/ ಪುರಸಭೆ/ ನಗರಸಭೆ ಮಾಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೇ? **(ವಿವರ ನೀಡುವುದು).** | ದಕ್ಷಿಣ ಕನ್ನಡ ಜಿಲ್ಲೆಯ ಈ **ಕೆಳಕಂಡ** ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುತ್ತವೆ.<br>1) ಪುತ್ತೂರು ತಾಲ್ಲೂಕಿನ **ಕಡಬ** ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ **ಮೇಲ್ದರ್ಜೆ**ಗೇರಿಸಿ ದಿನಾಂಕ:19.03.2020ರಲ್ಲಿ **ಕರ್ನಾಟಕ** ರಾಜ್ಯ ಪತ್ರದಲ್ಲಿ ಅಂತಿಮ **ಅಧಿಸೂಚನೆ**ಯನ್ನು ಪ್ರಕಟಿಸಲಾಗಿದೆ.<br>2) ಮಂಗಳೂರು ತಾಲ್ಲೂಕಿನ **ಬಜಪೆ** ಮತ್ತು ಮಳವೂರು ಗ್ರಾಮ ಪಂಚಾಯಿತಿ.<br>3) ಮಂಗಳೂರು ತಾಲ್ಲೂಕಿನ ಮೆನ್ನಬೆಟ್ಟು, ಕಿನ್ನಿಗೋಳಿ ಮತ್ತು ಕಟೀಲು. |

ಸಂಖ್ಯೆ: ನಅಇ 19 ಎಲ್‌ಸಿಕ್ಯೂ 2020

**(ನಾರಾಯಣ ಗೌಡ)**
**ಪೌರಾಡಳಿತ, ತೋಟಗಾರಿಕೆ**
**ಮತ್ತು ರೇಷ್ಮೆ ಸಚಿವರು**